

ಉತ್ಸಾಹದಿಂದ ಅವರನ್ನು ಸ್ವಾಗತಿಸಿ, ಕಾರಿನ ಬಗ್ಗೆ ವರ್ಣನೆಗಿಳಿದ. ಅವರ ಕೋರಿಕೆಯಂತೆ ಅವರನ್ನು ಒಂದು ರೌಂಡ್ ಹೋಗಿಬರಲು ಅನುಮತಿ ಇತ್ತ. ಆದರೆ ಕಾರನ್ನು ಕಾಂಪೌಂಡ್‌ನಿಂದ ತಾನೇ ತೆಗೆದುಕೊಡುವುದಾಗಿ ಅವರನ್ನು ಹೊರಗೆ ನಿಲ್ಲಲು ತಿಳಿಸಿದ. ಆ ನಾಲ್ವರು ಉತ್ಸಾಹದಿಂದ ಗೇಟ್ ಹೊರಗೆ ನಿಂತು ಕಾರ್ ಬರುವುದನ್ನು ಕಾಯುತ್ತ ನಿಂತರು. ತಮ್ಮ ಕಾರಿಗೆ ಕೀ ಅಂಟಿಸಿ ತಿರುಗಿಸಿದ್ದೇ, ಕಾರು ಗೊರ್... ಎಂದು ಮುಲುಗತೊಡಗಿತು. ಬಹಳ ದಿವಸ ಒಂದೇ ಕಡೆ ನಿಂತಿದ್ದಕ್ಕೆ ಜಾಮ್ ಆಗಿರಬಹುದೆಂದು ಬ್ರೇಕ್ ಮೇಲೆ ಕಾಲಿಟ್ಟು ಸ್ವಲ್ಪ ಜೋರಾಗಿ ಎಕ್ಸಲೇಟರ್ ಒತ್ತಿದ್ದೇ ತಡ, ಕಾರಿನ ಕೊಳವೆಯಿಂದ ಕಪ್ಪು ಹೊಗೆ ಭುಸು ಭುಸು ಉಗುಳತೊಡಗಿತು. ಇಷ್ಟರಲ್ಲಾಗಲೇ ಕಾರ್ ಹಿಂದೆ ನಿಂತ ಆ ನಾಲ್ವರ ಮೈ ಮುಖವೆಲ್ಲ ಕಪ್ಪೋ ಕಪ್ಪು. ಕಾರ್ ಹಿಂದೆ ಅವರು ನಿಂತಿದ್ದರ ಪರಿವೇ ಇರದ ತಮ್ಮ ಎಕ್ಸಲೇಟರ್ ಒತ್ತುತ್ತಲೇ ಇದ್ದ, ಇಂಜಿನ್ ಬಿಸಿ ಮಾಡಲು. ಕೊಳವೆ ನಿರಂತರವಾಗಿ ಕಪ್ಪು ಹೊಗೆ ಉಗುಳುತ್ತಲೇ ಇತ್ತು. ಕಪ್ಪು ಹೊಗೆ ಕುಡಿದ ಆ ನಾಲ್ವರು ಸಿಟ್ಟಿನಿಂದ ನಿರ್ಗಮಿಸಿದರು. ಕಾರು ಮಾರುವ ನಮ್ಮ ಮೊದಲ ಪ್ರಯತ್ನ ವಿಫಲವಾಯಿತು.

ಮರಳಿ ಪ್ರಯತ್ನವ ಮಾಡುತ್ತಲೇ ಇದ್ದೆವು. ಕೆಲವು ದಿನಗಳ ನಂತರ ಮತ್ತಿಬ್ಬರು ವ್ಯಕ್ತಿಗಳು ಕಾರು ನೋಡಲು ಬರುವುದಾಗಿ ತಿಳಿಸಿದರು. ಮೊದಲಿನಂತೆ ಆಗಬಾರದೆಂದು ಅದನ್ನು ಗ್ಯಾರೇಜಿಗೆ ಒಯ್ದು, ಸ್ವಲ್ಪ ಮೇಕಪ್ ಮಾಡಿಸಿ ತಂದದ್ದಾಯಿತು. ಮರುದಿನ ಕಾರು ನೋಡಲು ಬಂದವರೆದುರು ಕಾರು ಯಾವ ತಕರಾರಿಲ್ಲದೆ ಸ್ಟಾರ್ಟ್ ಆಯಿತು. ಹಾಗೆ ಬಂದವರು ಕಾರಿನ ಹೊರಗೆ ನೋಡಿ, ಒಳಗೆ ನೋಡಲು ಹಿಂದಿನ ಬಾಗಿಲು ತೆಗೆದದ್ದೇ ತಡ, ಇಲಿಯೊಂದು ಚಂಗನೆ ಹಾರಿ ಹೊರಗೆ ಧುಮುಕಿತು. ಕಾರಿನ ಬಾಗಿಲ ಬಳಿ ನಿಂತವನು ಗಾಬರಿಯಿಂದ ಹಿಂದಕ್ಕೆ ಎಗರಿದಾಗ ಎಡವಿ ಹಿಮ್ಮಗ್ಗುಲಾಗಿ ಅಂಗಾತ ಬಿದ್ದುಬಿಟ್ಟರು. ಒಂದೇ ಕ್ಷಣದಲ್ಲಿ ಆದ ಅವಘಡದಿಂದ ಚಕಿತರಾದ ನಾವೆಲ್ಲ ಅವಕ್ಕಾಗಿ ನೋಡುತ್ತ ನಿಂತೆವು. ಕಾರಿನಲ್ಲಿ ನುಸುಳಿದ ಇಲಿಯನ್ನು ಶಪಿಸುತ್ತ ಒಳಗೆ ಇಣುಕಿ ನೋಡಿದರೆ ಹಿಂದಿನ ಸೀಟಿನ ಮೂಲೆಯ ಒಂದು ರಂಧ್ರದಿಂದ ಚಿಕ್ಕ ಚಿಕ್ಕ ಇಲಿಮರಿಗಳು ಹೊರನುಗ್ಗುತ್ತಿದ್ದವು. ಬಿದ್ದವರು ಸಾವರಿಸಿಕೊಂಡು ಎದ್ದು ನಿಂತು ಸಿಟ್ಟಿನಿಂದ, 'ನಿಮ್ಮ ಕಾರು ನಿಮಗೆ ಮುಬಾರಕ್' ಎಂದು ಹೇಳಿ ನಿರ್ಗಮಿಸಿದರು. ಕಾರು ಮಾರುವ ಎರಡನೇ ಪ್ರಯತ್ನವೂ ವಿಫಲವಾಯಿತು. ಇಷ್ಟರಲ್ಲಾಗಲೇ ಕಾರಿನ ಗುಣಗಾನ ಎಲ್ಲೆಡೆ ಹಬ್ಬಿ, ದುಡ್ಡು ಕೊಟ್ಟು ಕೊಳ್ಳುವುದಿರಲಿ, ಪುಗಸಟ್ಟೆಯಾಗಿಯೂ ಯಾರೂ ಪಡೆಯಲು ಮನಸ್ಸು ಮಾಡಲೇ ಇಲ್ಲ.

ಹೊಸ ಕಾರು ಕೊಂಡರೂ ಹಳೆ ಕಾರು ಮನೆಯಲ್ಲಿ ನಿಂತೇ ಇದೆ. ಈಗಲೂ ಅದರಲ್ಲಿ ಹಲ್ಲಿ–ಇಲಿಗಳು ಮನೆಮಾಡಿಕೊಂಡಿವೆ. ಮನೆಯಲ್ಲಿರುವ ಒಬ್ಬ ವಯಸ್ಸಾದ ಸದಸ್ಯರಂತೆ ಅದರ ಇರುವಿಕೆಯನ್ನು ಸ್ವಾಭಾವಿಕವಾಗಿ ಸ್ವೀಕರಿಸಿದ್ದೇವೆ.

ನಮ್ಮ ದೇಶದಲ್ಲಿ ಹಳೆಯ ವಸ್ತುಗಳು ನಿರಂತರವಾಗಿ ತಲೆಮಾರುಗಳಿಂದಲೂ ನಮ್ಮೊಂದಿಗೆ ಸಾಗಿಬಂದಿರುತ್ತವೆ. ಮನೆಯಲ್ಲಿ ನಮಗೆ ಇರಲು ಸ್ಥಳದ ಅಭಾವವಿದ್ದರೂ, ಹಳೆಯ ವಸ್ತುಗಳಿಗೂ ಒಂದಿಷ್ಟು ಸ್ಥಳಾವಕಾಶ ಕೊಡುವಷ್ಟು ಔದಾರ್ಯ ನಮ್ಮಲ್ಲಿದ್ದೇ ಇದೆ.

ಪ್ರತಿಕ್ರಿಯಿಸಿ: **feedback@sudha.co.in**